<u>ಪಿಡಬ್ಲ್ಯು-**2**</u>

<u>ದಿನಾಂಕ: **03-01-2026** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ಪ್ರತಿವಾದಿ ನಂ.1 ಮತ್ತು 3 ರವರ ಪರವಾಗಿ ಶ್ರೀ ಕೆ.ಎ.ಆರ್. ವಕೀಲರಿಂದ:-</u>

ನಾನು ಲಿಂಗನಗೌಡ ರವರನ್ನು ನೋಡಿರುತ್ತೇನೆ. ಸದರಿಯವರ ಫೋಟೋ ನೋಡಿದರೆ ಗುರುತಿಸುತ್ತೇನೆ. ಲಿಂಗನಗೌಡನ ತಂದೆ ಹೆಸರು ಭರಮಗೌಡ. ಲಿಂಗನಗೌಡರಿಗೆ ಕರಿಸೋಮನಗೌಡ ಎಂತಲೂ ಕರೆಯುತ್ತಿದ್ದರು ಎಂದರೆ ಅವರ ಅಡ್ಡಹೆಸರು ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ-8 ರ ಮೊದಲನೇ ಪುಟದಲ್ಲಿರುವ ಫೋಟೋ ನೋಡಿ ಕರಿಸೋಮನಗೌಡ ಬಿನ್ ಭರಮಗೌಡರ ಫೋಟೋ ಎಂದು ಒಪ್ಪಿಕೊಳ್ಳುತ್ತಾರೆ. ನಿಡಿ-9 ರಲ್ಲಿರುವ ಫೋಟೋ ತೋರಿಸಲಾಗಿ ಅದು ಲಿಂಗನಗೌಡ @ ಕರಿಸೋಮನಗೌಡರ ಫೋಟೋ ಎಂದು ಒಪ್ಪಿಕೊಳ್ಳುತ್ತಾರೆ. ನಿಡಿ-10 ರಲ್ಲಿರುವ ಫೋಟೋ ಕೂಡ ಸದರಿಯವರದ್ದೆ ಎಂದು ಒಪ್ಪಿಕೊಳ್ಳುತ್ತಾರೆ. ಸದರಿಯವರಿಗೆ ಯಾವ ಯಾವ ಊರುಗಳಲ್ಲಿ ಆಸ್ತಿಗಳು ಇವೆ ಎಂದು ಕೇಳಿರುತ್ತೇನೆ ಆದರೆ ನೋಡಿಲ್ಲ. ನಾನು ವಾದಿಗೆ ನೇರವಾಗಿ ಸಂಬಂಧಿಕನಿದ್ದು ನಿಂಗನಗೌಡನಿಗೆ ಅಲ್ಲ. 2 ನೇ ಪ್ರತಿವಾದಿಯನ್ನು ನನ್ನ ಅಕ್ಕನ ಮಗನಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. 2 ನೇ ಪ್ರತಿವಾದಿಯ ಮದುವೆಯ ಸಮಯದಲ್ಲಿ ನಿಂಗನಗೌಡರು ನಿವೃತ್ತಿ ಹೊಂದಿದ್ದರು. ಆ ವೇಳೆಗೆ ಲಿಂಗನಗೌಡರು ತಮ್ಮ ಸ್ವಂತ ಹಣದಿಂದ ಕೆಲವು ಆಸ್ತಿಗಳನ್ನು ಖರೀದಿಸಿದ್ದರೋ ಇಲ್ಲವೋ ಎಂದು ಕೇಳಲಾಗಿ ಸಾಕ್ಷಿ ಗದಗದಲ್ಲಿರುವ ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ಕೆಲವು ಆಸ್ತಿಗಳನ್ನು ಖರೀದಿಸಿರುತ್ತೇನೆಂದು ಲಿಂಗನಗೌಡರು ತಮಗೆ ಹೇಳುತ್ತಿದ್ದರು ಎಂದು ಹೇಳುತ್ತಾರೆ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಲಿಂಗನಗೌಡರು ನನಗೆ ಏನು ಹೇಳಿರುತ್ತಾರೆ ಆ ವಿಷಯವನ್ನು ನಾನು ಹೇಳಿರುತ್ತೇನೆ. ಗದಗದಲ್ಲಿರುವ ಆಸ್ತಿಯಿಂದ ಲಿಂಗನಗೌಡರಿಗೆ ಎಷ್ಟು ಆದಾಯ ಬರುತ್ತಿತ್ತು ಎಂದು ಅವರು ನನಗೆ ಹೇಳಿರುತ್ತಾರೆ. ಅದೇ ರೀತಿ ಅವರಿಗೆ ಎಷ್ಟು ಸಂಬಳ ಬರುತ್ತಿತ್ತು ಅದರಲ್ಲಿ ಎಷ್ಟು ಖರ್ಚಾಗುತ್ತಿತ್ತು ಮತ್ತು ಎಷ್ಟು ಉಳಿತಾಯ ಆಗುತ್ತಿತ್ತು ಎಂದು ನನಗೆ ಹೇಳಿರುವುದಿಲ್ಲ.

ಲಿಂಗನಗೌಡರಿಗೆ ತಲೆಗೆ ಪೆಟ್ಟು ಬಿದ್ದು ಚಿಕಿತ್ಸೆ ಪಡೆದಿರುತ್ತಾರೆಂದು ನಾನು ಹೇಳಿದ್ದು ಅವರು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ ಅವರು ಮನೆಗೆ ಬಂದ ನಂತರ ನಾನು ಅವರನ್ನು ನೋಡಲು ಹೋಗಿರುತ್ತೇನೆ. ಆಗ ಅವರು ಯಾರನ್ನೂ ಗುರುತು ಹಿಡಿಯುತ್ತಿರಲಿಲ್ಲ ಅವರು ಏನು ಹೇಳುತ್ತಿದ್ದರು ಎಂದು ಅರ್ಥವಾಗುತ್ತಿರಲಿಲ್ಲ. ಅವರನ್ನು ಆಸ್ಪತ್ರೆಯಿಂದ ತಂದ ನಂತರ ಅರಸೀಕೆರೆಯಲ್ಲಿರುವ ಸಿದ್ದಾಪುರ ಗ್ರಾಮದಲ್ಲಿರುವ ಅವರ ಮನೆಗೆ ಹೋಗಿ ನೋಡಿರುತ್ತೇನೆ. ಆಗ ಅವರ ಜೊತೆ ಅವರ ಹೆಂಡತಿ ಮತ್ತು 1 ನೇ ಪ್ರತಿವಾದಿ ಇದ್ದರು. ಆಗ ಅವರು ಲಿಂಗನಗೌಡರುಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಾಖಲೆಗಳನ್ನು ನನಗೆ ತೋರಿಸಿರುವುದಿಲ್ಲ. ಈ ದಿನದಿಂದ 3-4 ವರ್ಷಗಳ ಹಿಂದೆ ಲಿಂಗನಗೌಡರು ತಲೆಗೆ ಪೆಟ್ಟು ಮಾಡಿಕೊಂಡಿದ್ದರು. ಆ ರೀತಿ ತಲೆಗೆ ಪೆಟ್ಟು ಬಿದ್ದ 2 ವರ್ಷಗಳ ನಂತರ ಲಿಂಗನಗೌಡರು ಮೃತಪಟ್ಟಿರುತ್ತಾರೆ. ಲಿಂಗನಗೌಡರು ನಿವೃತ್ತಿ ಹೊಂದಿದ ನಂತರ ಆಸ್ತಿಗಳನ್ನು ಖರೀದಿಸಿರುತ್ತಾರೋ ಅಥವಾ ಅದಕ್ಕಿಂತ ಮೊದಲೇ ಖರೀದಿಸಿರುತ್ತಾರೋ ಎಂದು ಈಗ ನೆನಪಿಲ್ಲ. 1 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸವಿದ್ದಾರೆ. ಅವರು ಮೃತಪಡುವ ಕಾಲದಲ್ಲಿ ಅವರ ಜೊತೆ ಯಾರು ಇದ್ದರು ಎಂದು ನಾನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯ ಸುಳ್ಳು ಎಂದರೆ ಸರಿಯಲ್ಲ. ನನಗೆ ಲಿಂಗನಗೌಡರ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಲಿಂಗನಗೌಡರು ಸಾಯುವವರೆಗೂ ಆರೋಗ್ಯವಾಗಿಯೇ ಇದ್ದರು ಎಂದರೆ ಸರಿಯಲ್ಲ. ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **03-01-2026.**